**O. S. No:217/2024**
**PW:3**

(ಇಂದು ದಿನಾಂಕಃ **24-10-2025** ರಂದು ಸಾಕ್ಷಿಯನ್ನು ತೆರೆದ ನ್ಯಾಯಾಲಯಕ್ಕೆ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.)

**ಮುಖ್ಯ ವಿಚಾರಣೆಃ ಶ್ರೀ ಕೆ ಆರ್ ಎಂ ವಕೀಲರಿಂದ:**

ನನ್ನ ಮುಖ್ಯ ವಿಚಾರಣೆ ಸಲುವಾಗಿ ಪ್ರಮಾಣ ಪತ್ರ ಸಲ್ಲಿಸಿದ್ದು ಅದರಲ್ಲಿರುವ ವಿಷಯಗಳು ನಿಜ ಇರುತ್ತವೆ.

**ಪಾಟೀ ಸವಾಲುಃ ಶ್ರೀ ಕೆ ಎನ್ ಕೆ ವಕೀಲರಿಂದಃ**

ನನಗೆ ಕೊಂಗವಾಡ ಗ್ರಾಮದಲ್ಲಿ ಮಾತ್ರ ಆಸ್ತಿಗಳಿರುತ್ತವೆ. ನಾನು ಕೊಂಗವಾಡದ ನಿವಾಸಿಯಾಗಿರುತ್ತೇನೆ. ನಾನು ತಡಹಾಳದಲ್ಲಿ ವಾಸವಿದ್ದೇನೆ ಎಂದರೆ ಸರಿಯಲ್ಲ. ಈ ದಾವೆಯನ್ನು ವಾದಿಯರು 2ನೇ ಪ್ರತಿವಾದಿಯರ ವಿರುದ್ಧ ಸಲ್ಲಿಸಿರುತ್ತಾರೆ. ದಾವಾ ಜಮೀನುಗಳು ಸರ್ವೆ ನಂಃ 258 ಕ್ಷೇತ್ರ 5 ಎಕರೆ 1 ಗುಂಟೆ ಹಾಗೂ ಸರ್ವೆ ನಂಃ 20 ರಲ್ಲಿ 3 ಹಿಸ್ಸೆಗಳಿದ್ದು ಅವುಗಳ ಕ್ಷೇತ್ರ 2 ಎಕರೆ 39 ಗುಂಟೆ ಇರುತ್ತವೆ. ಈಗ ವಾದಿಯರು ಹಾಗೂ 1ನೇ ಪ್ರತಿವಾದಿ ಒಂದೇ ಮನೆಯಲ್ಲಿ ವಾಸವಿರುತ್ತಾರೆ ಎಂದರೆ ಸರಿ. 1ನೇ ವಾದಿ 1ನೇ ಪ್ರತಿವಾದಿಯ ವಿರುದ್ಧ ಜೀವನಾಂಶ ಕೋರಿ ಕ್ರಿ. ಮಿ. ಸಂಃ 270/2024 ನ್ನು ಸಲ್ಲಿಸಿದ್ದರು ಎಂದರೆ ಸರಿ. ಸದರಿ ಅರ್ಜಿಯಲ್ಲಿ 1ನೇ ವಾದಿ ಹಾಗೂ 1ನೇ ಪ್ರತಿವಾದಿ ಈಗ 4-5 ದಿನಗಳ ಹಿಂದೆ ರಾಜೀ ಮಾಡಿಕೊಂಡಿರುತ್ತಾರೆ ಎಂದರೆ ಸರಿ. 1ನೇ ಪ್ರತಿವಾದಿ 4-5 ವರ್ಷಗಳ ಹಿಂದೆ ಮದ್ಯ ಸೇವಿಸಲು ಪ್ರಾರಂಭಿಸಿರುತ್ತಾನೆ. ನನ್ನ ಮುಖ್ಯ ವಿಚಾರಣೆಯ ಖಂಡಿಕೆ ಸಂಃ 3 ರಿಂದ 5 ರಲ್ಲಿಯ ಅಂಶಗಳು ಸುಳ್ಳಿನಿಂದ ಕೂಡಿರುತ್ತವೆ ಎಂದರೆ ಸರಿಯಲ್ಲ. 2ನೇ ಪ್ರತಿವಾದಿ 1ನೇ ಪ್ರತಿವಾದಿಯಿಂದ ಜಮೀನು ಸರ್ವೆ ನಂಃ 258/1 ಕ್ಷೇತ್ರ 5 ಎಕರೆ 1 ಗುಂಟೆ ಜಮೀನನ್ನು ನೋಂದಾಯಿತ ಖರೀದಿ ಪತ್ರದ ಮುಖಾಂತರ ಆಗಿನ ಮಾರುಕಟ್ಟೆಯ ಬೆಲೆಗೆ ಖರೀದಿಸಿರುತ್ತಾರೆ ಎಂದರೆ ಸರಿ. ಸದರಿ ಖರೀದಿ ಕರಾರು ಪತ್ರಕ್ಕೆ 1ನೇ ವಾದಿ ಸಹಿ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಸದರಿ ವಿಷಯ ನನಗೆ ಗೊತ್ತಿಲ್ಲದಿದ್ದರೂ ಸಹ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. 1ನೇ ಪ್ರತಿವಾದಿಗೆ ಇಬ್ಬರು ಸಹೋದರರು. 1ನೇ ಪ್ರತಿವಾದಿ ಹಾಗೂ ಆತನ ಹೆಂಡತಿ ಮಕ್ಕಳು ಒಂದು ಮನೆಯಲ್ಲಿ ವಾಸವಿದ್ದು, ಆತನ ಸಹೋದರರು ಪ್ರತ್ಯೇಕವಾಗಿ ವಾಸವಿದ್ದಾರೆ ಎಂದರೆ ಸರಿ. 1ನೇ ಪ್ರತಿವಾದಿಗೆ ಬೇರೆ ಯಾವುದೇ ನೌಕರಿ ಅಥವಾ ವ್ಯವಹಾರಗಳು ಇರುವುದಿಲ್ಲ. 1ನೇ ವಾದಿಯ ಮದುವೆಯಾಗಿ ಅಂದಾಜು 15 ವರ್ಷವಾಗಿರುತ್ತದೆ. 1ನೇ ಪ್ರತಿವಾದಿ ಮದ್ಯಪಾನ ಮಾಡಲು ಪ್ರಾರಂಭಿಸುವುದಕ್ಕಿಂತ ಮುಂಚೆ ಮನೆತನವನ್ನು ನೋಡಿಕೊಂಡು ಹೋಗುತ್ತಿದ್ದ ಎಂದರೆ ಸರಿಯಲ್ಲ. 1ನೇ ಪ್ರತಿವಾದಿ ತಾನು

ಮದುವೆಯಾದಾಗಿನಿಂದ ಕುಟುಂಬವನ್ನು ಉತ್ತಮವಾಗಿ ನಿರ್ವಹಣೆ ಮಾಡುತ್ತಾ ಬಂದಿರುತ್ತಾನೆ ಎಂದರೆ ಸರಿಯಲ್ಲ. ಕಾರಣ 1 ನೇ ಪ್ರತಿವಾದಿ ಕುಟುಂಬದ ಅಡಚಣೆಗಾಗಿ ಹಾಗೂ ಮಕ್ಕಳ ವಿದ್ಯಾಭ್ಯಾಸಕ್ಕಾಗಿ ಜಮೀನು ಸರ್ವೇ ನಂಃ 258/1 ನ್ನು 2 ನೇ ಪ್ರತಿವಾದಿಗೆ ಮಾರಾಟ ಮಾಡಿ ಬಂದ ರೂ.10,05,000/- ಹಣವನ್ನು ಕುಟುಂಬದ ಅಡಚಣೆಗಾಗಿ ಹಾಗೂ ಮಕ್ಕಳ ವಿದ್ಯಾಭ್ಯಾಸಕ್ಕಾಗಿ ಖರ್ಚು ಮಾಡಿರುತ್ತಾನೆ ಎಂದರೆ ಸರಿಯಲ್ಲ. ಕಾರಣ 1 ನೇ ವಾದಿಗೆ ಸಹಾಯವಾಗಲು ಮತ್ತು 2 ನೇ ಪ್ರತಿವಾದಿಗೆ ತೊಂದರೆ ನೀಡುವ ಉದ್ದೇಶದಿಂದ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸದರಿ ಆಸ್ತಿ ಖರೀದಿ ಆದಾಗಿನಿಂದ 2 ನೇ ಪ್ರತಿವಾದಿ ಸದರಿ ಜಮೀನಿನ ಕಬ್ಜಾದಲ್ಲಿದ್ದಾರೆ ಎಂದರೆ ಸರಿ. ನಾನು ಕೊಂಗವಾಡ ಗ್ರಾಮದಲ್ಲಿ ನನಗೆ ಸಂಬಂಧಿಸಿ ಆಸ್ತಿಗಳು ಇರದೇ ಇದ್ದರೂ ಸಹ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಕೊಂಗವಾಡ ಗ್ರಾಮದ ನಿವಾಸಿ ಎಂದು ತೋರಿಸಲು ದಾಖಲೆಯನ್ನು ಹಾಜರು ಪಡಿಸಿರುವುದಿಲ್ಲ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ 1 ನೇ ಪ್ರತಿವಾದಿ ಪರ ವಕೀಲರು ಪಾಟೀ ಸವಾಲಿಗೆ ಸಮಯ ಕೋರಿದ್ದು ಸಮಯ ನೀಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು.)

**ಓ. ಹೇ. ಕೇ. ಸರಿ. ಇದೆ.**

**Sd/-**

**ಹಿರಿಯ ದಿವಾಣಿ ನ್ಯಾಯಾಧೀಶರು ಹಾಗೂ ಜೆ.ಎಂ.ಎಫ್.ಸಿ**

**ನವಲಗುಂದ.**